**ಕರ್ನಾಟಕ ಸರ್ಕಾರ**

**(ಸಿ.ಆರ್.ಪಿ.67)**

**ಹೇಳಿಕೆ ಹಾಳೆ**
**(ಆರ್.ಪಿ.ಸಂಖ್ಯೆ 57)**
**ನಮೂನೆ ಸಂಖ್ಯೆ 4**

**ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ಹಾಗೂ ಸ್ಪೆಷಲ್ ನ್ಯಾಯಾಧೀಶರ ನ್ಯಾಯಾಲಯ, ಹಾಸನ**

**ಸ್ಪೆಷಲ್ ಕೇಸ್ ನಂಬರ್ ಃ: 140/2015**

ಪ್ರಾಸಾ- 17 ಚಾಸಾ- 23

| | | |
|---|---|---|
| ಸಾಕ್ಷಿದಾರರ ಹೆಸರುಃ | ಃ | ಎನ್ ಕದರಪ್ಪ |
| ತಂದೆಯ ಹೆಸರುಃ | ಃ | ನರಸಿಂಹಪ್ಪ |
| ವಯಸ್ಸುಃ | ಃ | 62 ವರ್ಷ |
| ಉದ್ಯೋಗಃ | ಃ | ನಿವೃತ್ತ ಎಲ್ ಡಿ ಎಂ, ವಿಜಯಾ ಬ್ಯಾಂಕ್ |
| ವಾಸಃ | ಃ | ದಾವಣಗೆರೆ |

**ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಬೋಧಿಸಿದ ದಿನಾಂಕಃ 19-01-2024**
**ಮುಖ್ಯ ವಿಚಾರಣೆಃ ಸರ್ಕಾರದ ಪರವಾಗಿ ಮಾನ್ಯ ವಿಶೇಷ ಅಭಿಯೋಜಕರಿಂದಃ**

ನಾನು ಆಗಸ್ಟ್ 2013 ರಿಂದ ಜುಲೈ 2015 ರ ತನಕ ವಿಜಯಾ ಬ್ಯಾಂಕ್ ಎನ್ ಆರ್.ಸರ್ಕಲ್ ಶಾಖೆ ಹಾಸನ, ಇಲ್ಲಿ ಚೀಫ್ ಮ್ಯಾನೇಜರ್ ಆಗಿ ಕರ್ತವ್ಯ ನಿರ್ವಹಿಸುತ್ತಿದ್ದೆ.

2. ಸಿ.ಆರ್.ಮಂಜುನಾಥ್ ರವರ ಪತ್ನಿ ಎಸ್.ಪಿ. ಪದ್ಮಾವತಿ ರವರು ನಮ್ಮ ಬ್ಯಾಂಕಿನಲ್ಲಿ 2 ನಿಶ್ಚಿತ ಠೇವಣಿಗಳು ಮತ್ತು ಒಂದು ಉಳಿತಾಯ ಖಾತೆಯನ್ನು ಹೊಂದಿದ್ದರು. ಅವುಗಳ ಬಗ್ಗೆ ಮಾಹಿತಿ ಕೋರಿ ಹಾಸನ ಲೋಕಾಯುಕ್ತ ಪೊಲೀಸ್ ನಿರೀಕ್ಷಕರು ನನಗೆ ದಿನಾಂಕ 07.06.2014 ರಂದು ಪತ್ರ ಬರೆದಿರುತ್ತಾರೆ. ಈಗ ತೋರಿಸಿದ ದಾಖಲೆಯು ಸದರಿ ಪತ್ರ ಆಗಿದ್ದು, ಅದನ್ನು ನಿಶಾನೆ ಪಿ.102 ಎಂದು ಗುರುತಿಸಲಾಗಿದೆ. ಸದರಿ ಕೋರಿಕೆಯ ಮೇರೆಗೆ ನಾನು ದಿನಾಂಕ 09.06.2014 ರಂದು ಹಾಸನ ಲೋಕಾಯುಕ್ತ ಪೊಲೀಸರಿಗೆ ನಾನು ಪತ್ರದ ಮೂಲಕ ಮಾಹಿತಿ

ನೀಡಿರುತ್ತೇನೆ. ಸದರಿ ಪತ್ರವನ್ನು ನಿಶಾನೆ ಪಿ.103 ಎಂದು ಮತ್ತು ಅದರಲ್ಲಿರುವ ನನ್ನ ಸಹಿಯನ್ನು ನಿಶಾನೆ ಪಿ.103(ಎ) ಎಂದು ಗುರುತಿಸಲಾಗಿದೆ. ಸದರಿ ಪತ್ರದ ಜೊತೆಯಲ್ಲಿ ಈ ಮೇಲೆ ಹೇಳಿರುವ ಉಳಿತಾಯ ಖಾತೆಯ ಅಕೌಂಟ್ ಎಕ್ಸ್ಟ್ರ್ಯಾಕ್ಟ್ ನ ನಕಲನ್ನು ಕಳುಹಿಸಿಕೊಟ್ಟಿರುತ್ತೇನೆ. ಸದರಿ ದಾಖಲೆಯು ನಕಲಾಗಿರುವ ಕಾರಣ ಅವುಗಳನ್ನು ನಿಶಾನೆಯಾಗಿ ಗುರುತಿಸಿಕೊಂಡಿಲ್ಲ.

**<u>ಪಾಟೀ ಸವಾಲುಃ- ಆರೋಪಿ ಪರ ಶ್ರೀ ಸಿ.ಎನ್.ವಿ. ವಕೀಲರಿಂದಃ-</u>**

ಈ ಮೇಲೆ ಹೇಳಿರುವ ಬ್ಯಾಂಕ್ ಖಾತೆ ಮತ್ತು ಎಫ್.ಡಿ. ಠೇವಣಿಯ ಬಗ್ಗೆ ನಾನು ಸರಿಯಾಗಿ ಪರಿಶೀಲನೆ ಮಾಡದೆ ಲೋಕಾಯುಕ್ತ ಪೊಲೀಸರ ಕೋರಿಕೆ ಮೇರೆಗೆ ನಾನು ಅವರಿಗೆ ಮಾಹಿತಿ ನೀಡಿದ್ದು ಎಂದರೆ ಸರಿಯಲ್ಲ. ನಮ್ಮ ಬ್ಯಾಂಕ್ ನ ದಾಖಲೆಗಳ ಆಧಾರದಲ್ಲಿ ನಾನು ಲೋಕಾಯುಕ್ತ ಪೊಲೀಸರಿಗೆ ಮಾಹಿತಿ ನೀಡಿರುತ್ತೇನೆ.

**<u>ಮರು ವಿಚಾರಣೆಃ</u>** ಇಲ್ಲ

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು)**

**ಓ.ಹೇ.ಕೇ.ಸ.ಇದೆ.**

**ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ಹಾಗೂ**

**ಸ್ಪೆಷಲ್ ನ್ಯಾಯಾಧೀಶರು, ಹಾಸನ.**